# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** 2024-25ನೇ ಸಾಲಿಗೆ ರೈತರ ಆತ್ಮಹತ್ಯೆ ಪ್ರಕರಣಗಳಡಿ ಪರಿಹಾರ, ಹಾವು ಕಡಿತ/ಆಕಸ್ಮಿಕ ಸಾವು, ಬಣವೆ ನಷ್ಟ ಪರಿಹಾರ ವಿತರಣೆಗೆ ಅನುದಾನ ಬಿಡುಗಡೆ ಮಾಡುವ ಕುರಿತು.

**ಉಲ್ಲೇಖ:** 1.ನಿರ್ದೇಶಕರು, ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ ನಿರ್ದೇಶನಾಲಯ ಇವರ ಏಕ ಕಡತ ಸಂಖ್ಯೆ: RC-DSSP0EST/16/2024., ದಿನಾಂಕ:04.04.2024.

2. ಸರ್ಕಾರದ ಆದೇಶ ಸಂಖ್ಯೆ:ಎಫ್‌ಡಿ 2ಟಿಎಫ್‌ಪಿ 2023, ದಿ:01.04.2024.

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ(1)ರ ನಿರ್ದೇಶಕರು, ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ ನಿರ್ದೇಶನಾಲಯ ಇವರ ಕಡತದಲ್ಲಿ 2024-25 ನೇ ಸಾಲಿನ ಆಯವ್ಯಯದಲ್ಲಿ ರೈತರ ಆತ್ಮಹತ್ಯೆ ಪ್ರಕರಣಗಳಡಿ ಪರಿಹಾರ, ಹಾವು ಕಡಿತ/ಆಕಸ್ಮಿಕ ಸಾವು, ಬಣವೆ ನಷ್ಟ ಪರಿಹಾರ ಯೋಜನೆಯ ಅನುಷ್ಠಾನಕ್ಕಾಗಿ ಲೆಕ್ಕ ಶೀರ್ಷಿಕೆ "2235-60-102-1-08-100"ರಡಿ ರೂ.64,38,34,000/-ಗಳ ಅನುದಾನವನ್ನು ಒದಗಿಸಲಾಗಿದೆ. ಅದರನ್ವಯ, ಮೊದಲನೇ ಕಂತಿನ ಅನುದಾನವಾಗಿ ನಾಲ್ಕನೇ ಒಂದು ಭಾಗ ರೂ.16,09,58,500/-(ಹದಿನಾರು ಕೋಟಿ ಒಂಬತ್ತು ಲಕ್ಷದ ಐವತ್ತೆಂಟು ಸಾವಿರದ ಐದು ನೂರು ರೂಪಾಯಿಗಳು ಮಾತ್ರ) ರೈತ ಕುಟುಂಬಕ್ಕೆ ಪರಿಹಾರ, ಬಣವೆ ನಷ್ಟ, ಹಾವು ಕಡಿತ/ ಆಕಸ್ಮಿಕ ಮರಣ ಪ್ರಕರಣಗಳಡಿ ಪರಿಹಾರ ವಿತರಣೆಗಾಗಿ ಲೆಕ್ಕಶೀರ್ಷಿಕೆ "2235-60-102-1-08-100"ಯಡಿ ನಿರ್ದೇಶನಾಲಯಕ್ಕೆ ಸದರಿ ಯೋಜನೆಗಾಗಿ ಈ ಕೆಳಕಂಡಂತೆ ಫಲಾನುಭವಿಗಳ ಪರಿಹಾರ ವಿತರಣೆಗೆ ಬಾಕಿಯಿರುತ್ತದೆ ಎಂದು ತಿಳಿಸಿ ಈ ಕೆಳಕಂಡಂತೆ ಬಿಡುಗಡೆ ಮಾಡಲು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

| ಯೋಜನೆ | ಪ್ರಕರಣವಾರು ನೀಡಬೇಕಾದ ಪರಿಹಾರ | 2024-25 ನೇ ಸಾಲಿನಲ್ಲಿ ಒದಗಿಸಲಾಗಿರುವ ಅನುದಾನ ರೂ.ಲಕ್ಷಗಳಲ್ಲಿ | ಪರಿಹಾರ ವಿತರಣೆಗೆ ಬಾಕಿ ಇರುವ ಫಲಾನುಭವಿಗಳ ವಿವರ |
|---|---|---|---|
| ರೈತರ ಆತ್ಮಹತ್ಯೆ ಪ್ರಕರಣ | 5,00,000/- | 6438.34 | 122 |
| ಆಕಸ್ಮಿಕ /ಹಾವು ಕಡಿತ ಮರಣ ಪ್ರಕರಣ | 2,00,000/- | | 116 |
| ಬಣವೆ ನಷ್ಟ ಪ್ರಕರಣ | ಗರಿಷ್ಠ ರೂ.20,000/- | | 385 |
| | **ಒಟ್ಟು** | **6438.34** | **623** |

....2

G. N. Susheela 10/4/2024

ಮೇಲೆ ಓದಲಾದ ಕ್ರಮ ಸಂಖ್ಯೆ(2)ರ ಆದೇಶದಲ್ಲಿ 2024-25ನೇ ಸಾಲಿನಲ್ಲಿ ಏಪ್ರಿಲ್‌ರಿಂದ ಜೂನ್‌ವರೆಗಿನ ತ್ರೈಮಾಸಿಕ ಕಂತಿನ ಹಣ ಬಿಡುಗಡೆಗೆ ಇಲಾಖಾ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳಿಗೆ ಆರ್ಥಿಕ ಅಧಿಕಾರ ಪ್ರತ್ಯಾಯೋಜಿಸಲಾಗಿದೆ. ಅದರನ್ವಯ ಆಯವ್ಯಯ ಅವಕಾಶದಂತೆ ರೈತರ ಆತ್ಮಹತ್ಯೆ ಪ್ರಕರಣಗಳಡಿ ಪರಿಹಾರ, ಹಾವು ಕಡಿತ/ಆಕಸ್ಮಿಕ ಸಾವು, ಬಣವೆ ನಷ್ಟ ಪರಿಹಾರ ಯೋಜನೆಯ ಅನುಷ್ಠಾನಕ್ಕಾಗಿ ಮೊದಲನೇ ಕಂತಿನಲ್ಲಿ ಅನುದಾನವಾಗಿ ನಾಲ್ಕನೇ ಒಂದು(1/4) ಭಾಗ ರೂ.16,09,58,500/-(ಹದಿನಾರು ಕೋಟಿ ಒಂಬತ್ತು ಲಕ್ಷದ ಐವತ್ತೆಂಟು ಸಾವಿರದ ಐದು ನೂರು ರೂಪಾಯಿಗಳು ಮಾತ್ರ) ಬಿಡುಗಡೆ ಮಾಡಲು ಸರ್ಕಾರವು ತಿರ್ಮಾನಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ : RD 68/ KAT/SSP 2024, ಬೆಂಗಳೂರು,**
**ದಿನಾಂಕ:10.04.2024**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, ಸಾಮಾಜಿಕ ಭದ್ರತೆ ಮತ್ತು ಪಿಂಚಣಿ ನಿರ್ದೇಶನಾಲಯದಿಂದ, ಲೆಕ್ಕಶೀರ್ಷಿಕೆ "2235-60-102-1-08-100"ಯಡಿ ರೈತರ ಆತ್ಮಹತ್ಯೆ ಪ್ರಕರಣಗಳಡಿ ಪರಿಹಾರ, ಹಾವು ಕಡಿತ/ಆಕಸ್ಮಿಕ ಸಾವು, ಬಣವೆ ನಷ್ಟ ಪರಿಹಾರ ಯೋಜನೆಯ ಅನುಷ್ಠಾನಕ್ಕಾಗಿ ಮೊದಲನೇ ಕಂತಿನ ಅನುದಾನವಾಗಿ ನಾಲ್ಕನೇ ಒಂದು (1/4)ಭಾಗ ರೂ.16,09,58,500/-(ಹದಿನಾರು ಕೋಟಿ ಒಂಬತ್ತು ಲಕ್ಷದ ಐವತ್ತೆಂಟು ಸಾವಿರದ ಐದು ನೂರು ರೂಪಾಯಿಗಳು ಮಾತ್ರ)ಗಳನ್ನು ಈ ಕೆಳಕಂಡ ಕೋಷ್ಟಕದಲ್ಲಿ ನಮೂದಿಸಿರುವಂತೆ ನಿರ್ದೇಶಕರು, ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ ನಿರ್ದೇಶನಾಲಯ ಇವರಿಗೆ ಈ ಕೆಳಕಂಡ ಷರತ್ತುಗಳ ಪಾಲನೆಗೆ ಒಳಪಟ್ಟು ಬಿಡುಗಡೆ ಮಾಡಿ ಆದೇಶಿಸಿದೆ.

| **ಯೋಜನೆ** | **ಪ್ರಕರಣವಾರು ನೀಡಬೇಕಾದ ಪರಿಹಾರ** | **2024-25 ನೇ ಸಾಲಿನಲ್ಲಿ ಒದಗಿಸಲಾಗಿರುವ ಅನುದಾನ ರೂ.ಲಕ್ಷಗಳಲ್ಲಿ** | **ಪರಿಹಾರ ವಿತರಣೆಗೆ ಬಾಕಿ ಇರುವ ಫಲಾನುಭವಿಗಳ ವಿವರ** |
|---|---|---|---|
| ರೈತರ ಆತ್ಮಹತ್ಯೆ ಪ್ರಕರಣ | 5,00,000/- | 6438.34 | 122 |
| ಆಕಸ್ಮಿಕ /ಹಾವು ಕಡಿತ ಮರಣ ಪ್ರಕರಣ | 2,00,000/- | | 116 |
| ಬಣವೆ ನಷ್ಟ ಪ್ರಕರಣ | ಗರಿಷ್ಠ ರೂ.20,000/- | | 385 |
| | **ಒಟ್ಟು** | **6438.34** | **623** |

**ಅನುದಾನದ ಬಳಕೆಯಲ್ಲಿ ನಿರ್ದೇಶಕರು, ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ ನಿರ್ದೇಶನಾಲಯ ರವರು ಪಾಲಿಸಬೇಕಾದ ಷರತ್ತುಗಳು:-**

I. ಮೇಲ್ಕಂಡ ಅನುದಾನವನ್ನು ಯಾವ ಉದ್ದೇಶಕ್ಕೆ ಬಿಡುಗಡೆ ಮಾಡಲಾಗಿದೆಯೋ ಅದೇ ಉದ್ದೇಶಕ್ಕೆ ಬಳಸಿಕೊಳ್ಳತಕ್ಕದ್ದು.

....3

II. ಫಲಾನುಭವಿಗಳ ಆಯ್ಕೆಯಲ್ಲಿ ಯಾವುದೇ ರೀತಿಯ ಪುನರಾವರ್ತನೆ ಆಗಬಾರದು, ಪುನರಾವರ್ತನೆ ಆಗಿದ್ದಲ್ಲಿ ಅಥವಾ ಅನುದಾನದ ಬಳಕೆಯಲ್ಲಿ ನಿಯಮಾನುಸಾರ ಅರ್ಹತೆ ಇಲ್ಲದಿರುವವರಿಗೆ ಅನುದಾನ ನೀಡಿದ್ದಲ್ಲಿ ನೇರವಾಗಿ ನಿರ್ದೇಶಕರು, ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ ನಿರ್ದೇಶನಾಲಯ, ಇವರನ್ನು ಹೊಣೆಗಾರರನ್ನಾಗಿ ಮಾಡಲಾಗುವುದು.

III. ಅನುದಾನದ ಬಳಕೆಯಲ್ಲಿ ಯಾವುದೇ ಲೋಪಗಳು ಕಂಡುಬಂದಲ್ಲಿ, ನಿರ್ದೇಶಕರು, ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ ನಿರ್ದೇಶನಾಲಯ ಹಾಗೂ ಸಂಭಂದಪಟ್ಟ ಅಧಿಕಾರಿಗಳನ್ನು ನೇರ ಜವಾಬ್ದಾರರಾಗಿ ಮಾಡಲಾಗುವುದು.

IV. ಕಡ್ಡಾಯವಾಗಿ ಹಣಬಳಕೆ ಪ್ರಮಾಣ ಪತ್ರವನ್ನು ಸರ್ಕಾರಕ್ಕೆ ಸಲ್ಲಿಸುವುದು.

V. ಸದರಿ ಅನುದಾನದಿಂದ ವರ್ಷವಾರು ಸಾಧಿಸಲಾಗುವುದು ಆರ್ಥಿಕ ಮತ್ತು ಭೌತಿಕ ಪ್ರಗತಿಯನ್ನು ಜಿಲ್ಲಾವಾರು, ತಾಲ್ಲೂಕುವಾರು, ಗ್ರಾಮಪಂಚಾಯಿತಿವಾರು, ಫಲಾನುಭವಿವಾರು ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ ನಿರ್ದೇಶನಾಲಯದ ಅಧಿಕೃತ ಜಾಲತಾಣದಲ್ಲಿ ಕೂಡಲೇ ಪ್ರಚುರಪಡಿಸತಕ್ಕದ್ದು.

ಈ ಆದೇಶವನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ(ವಿಪತ್ತು ನಿರ್ವಹಣೆ, ನೋಂ & ಮು, ಡಿಎಸ್‌ಎಸ್‌ಪಿ) ಇವರಿಗೆ ಪ್ರತ್ಯಾಯೋಜಿಸಿರುವ ಆರ್ಥಿಕ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

G. N. Susheela 10/4/2024
**(ಜಿ.ಎನ್.ಸುಶೀಲ)**
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ(ಕೆ.ಎ.ಟಿ, ಬಾ.ನಿ ಮತ್ತು
ಸಾ.ಭ&ಪಿಂಚಣಿಗಳ ನಿರ್ದೇಶನಾಲಯ)

10/4/24

**ಇವರಿಗೆ:**

1. ಮಹಾಲೇಖಪಾಲರು(ಎ ಮತ್ತು ಇ) ಕರ್ನಾಟಕ, ಬೆಂಗಳೂರು.
2. ನಿರ್ದೇಶಕರು, ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ ನಿರ್ದೇಶನಾಲಯ, ಕಂದಾಯ ಭವನ, ಬೆಂಗಳೂರು.
3. ಸರ್ಕಾರದ ಅಧೀನ ಕಾರ್ಯದರ್ಶಿಗಳು(ವೆಚ್ಚ-7&8), ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
4. ಆಯುಕ್ತರು, ಖಜಾನೆ ಇಲಾಖೆ, ವಿ.ವಿ ಗೋಪುರ, ಅಂಬೇಡ್ಕರ್ ವೀದಿ,ಬೆಂಗಳೂರು.
5. ಆಯುಕ್ತರು, ಖಜಾನೆ ಆಯುಕ್ತಾಲಯ, ಕೆ.ಪಿಎಲ್.ಸಿ ಕಟ್ಟಡ, ಅರಮನೆ ರಸ್ತೆ, ಬೆಂಗಳೂರು.
6. ಜಂಟಿ ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ನೃಪತುಂಗ ರಸ್ತೆ, ಬೆಂಗಳೂರು.
7. ಹೆಚ್ಚುವರಿ ಪ್ರತಿ ಮತ್ತು ರಕ್ಷಾ ಕಡತ.

**ಪ್ರತಿ:**

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು(ವಿ.ನಿ, ನೋಂ & ಮು, ಡಿಎಸ್‌ಎಸ್‌ಪಿ) ಕಂದಾಯ ಇಲಾಖೆರವರ ಆಪ್ತ ಕಾರ್ಯದರ್ಶಿಗಳು, ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿಗಳು(ಆಯವ್ಯಯ ಮತ್ತು ಸಂಪನ್ಮೂಲ) ಆರ್ಥಿಕ ಇಲಾಖೆರವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
3. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು(ಕೆ.ಎ.ಟಿ, ಬಾ.ನಿ, ರಾ.ವಿ.ವೇ ಮತ್ತು ಸಾ.ಭ &ಪಿಂಚಣಿ), ಕಂದಾಯ ಇಲಾಖೆ,ಬೆಂಗಳೂರು.